ಈ) ಹೊನ್ನಾವರ ಮತ್ತು ಭಟ್ಕಳ ತಾಲ್ಲೂಕುಗಳಲ್ಲಿ ಭೂ ಸುಧಾರಣೆ ಕಾಯ್ದೆಯನ್ವಯ ಹೆಚ್ಚುವರಿ ಭೂಮಿಯನ್ನು ಕಂಡು ಹಿಡಿದ ಪ್ರಕರಣಗಳಿರುವುದಿಲ್ಲ. ಇದರಿಂದಾಗಿ ಪರಿಸರದ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಪ್ರಶ್ನೆ ಉದ್ಭವಿಸುವುದಿಲ್ಲ.

ಭಟ್ಕಳ ತಾಲ್ಲೂಕು ಹಾಗೂ ಹೊನ್ನಾವರ ತಾಲ್ಲೂಕಿನ ಗುಂಡಬಾಳ ನೆರೆಹಾವಳಿ.

2815: (2988)

ಶ್ರೀ ಶಿವಾನಂದ ನಾಯ್ಕ್ (ಭಟ್ಕಳ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಟ್ಕಳ ತಾಲ್ಲೂಕು ಹಾಗೂ ಹೊನ್ನಾವರ ತಾಲ್ಲೂಕಿನ ಗುಂಡಬಾಳ ನೆರೆ ಹಾವಳಿಯಿಂದ ಆದ ಒಟ್ಟು ನಷ್ಟದ ಪ್ರಮಾಣವೆಷ್ಟು?

ಆ) ಈ ನೆರೆ ಹಾವಳಿಗೆ ಭಾಗಶಃ ಹಾಗೂ ಪೂರ್ತಿ ಹಾನಿಯಾದ ಮನೆಗಳ ಸಂಖ್ಯೆ ಎಷ್ಟು?

ಇ) ಹಾನಿಗೊಳಗಾದವರಿಗೆ ನೀಡಲಾಗಿರುವ ಪರಿಹಾರದ ಒಟ್ಟು ಮೊತ್ತವೆಷ್ಟು? ಹಾನಿಗೊಳಗಾದವರಿಗೆ ಇನ್ನೂ ನೀಡಬೇಕಾಗಿರುವ ಪರಿಹಾರದ ಬಾಕಿ ಮೊತ್ತವೆಷ್ಟು?

ಈ) ಈ ಪರಿಹಾರವನ್ನು ಪೂರ್ಣ ಪ್ರಮಾಣದಲ್ಲಿ ನೀಡಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗುವುದು?

ಉ) ಹೆಚ್ಚುವರಿ ಮನೆಗಳನ್ನು ಹೊನ್ನಾವರ ಹಾಗೂ ಭಟ್ಕಳ ತಾಲ್ಲೂಕು ನೆರೆ ಪೀಡಿತರಿಗೆ ಮಂಜೂರು ಮಾಡಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು):

ಅ) ನಷ್ಟದ ವಿವರ ಹೀಗಿದೆ - (ರೂ.ಲಕ್ಷಗಳಲ್ಲಿ)

ಭಟ್ಕಳ ತಾಲ್ಲೂಕು	-	282.21
ಹೊನ್ನಾವರ ತಾಲ್ಲೂಕು	-	70.22
ಒಟ್ಟು	-	352.43

ಆ) ಭಾಗಶಹ ಬಿದ್ದ ಮನೆಗಳು - 741

ಪೂರ್ತಿ ಬಿದ್ದ ಮನೆಗಳು - 65

ಇ) ಹಾನಿಗೊಳಗಾದವರಿಗೆ ರೂ.21.50 ಲಕ್ಷಗಳನ್ನು ಪರಿಹಾರವಾಗಿ ನೀಡಲಾಗಿದೆ. ಇನ್ನು ಯಾವುದೇ ಪರಿಹಾರ ನೀಡುವ ಪ್ರಕರಣಗಳು ಬಾಕಿ ಉಳಿದಿರುವುದಿಲ್ಲ.

ಈ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಪ್ರಸಕ್ತ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ವಸತಿ ಯೋಜನೆಗಳಲ್ಲಿ ಮನೆ ನಿರ್ಮಿಸಿ ಕೊಡುವ ಬಗ್ಗೆ ಪರಿಶೀಲಿಸಲು ತಿಳಿಸಲಾಗುವುದು.

Amendment to A.P.M.C. Act

2818: (3723)

Sri D.V.Sadananda Gowda (Puthuru): Will the Minister of State for Agricultural Marketing be pleased to State

a) Whether it has come to the notice of the Government that the farmers community are facing difficulties by inclusion of section 77 of in the A.P.M.C. Act.

b) If so, what actions have been taken in this regard;

c) Is there any arrangments in A.P.M.C. to provide Produce Loans, if so the No.of Persons availed such loans (furnish details)

d) The No. of Agriculturists which have availed such loans and the amount paid them in Dakashina Kannada District;

Sri H.Nagappa (MINSTER FOR STATE FOR